

# ಹನುಮಾನ್ ಕಿರೀಟ

■ ಚಿತ್ರ–ಬರಹ: **ಮಂಜುನಾಥ. ಡಿ.ಎಸ್.**

ವಿಶಾಲವಾದ ಹಸಿರೆಲೆಗಳ ನಡುವಿನಿಂದ ಹೊರಹೊಮ್ಮುವ ಕಾಂಡಗಳ ಅಗ್ರದಲ್ಲಿ ಕಂಗೊಳಿಸುವ ಬಹು ಮಜಲಿನ ಆಕರ್ಷಣೀಯ ಪುಷ್ಪಮಂಜರಿಯ ವ್ಯವಹಾರ ನಾಮ ಹನುಮಾನ್ ಕಿರೀಟ. ವರ್ಬೆನೇಸಿಯೇ ಕುಟುಂಬದಿಂದ ಲಮಿಯೇಸಿಯೇ ಕುಟುಂಬಕ್ಕೆ ವರ್ಗಾವಣೆಗೊಂಡ ಈ ಸಸ್ಯದ ವೈಜ್ಞಾನಿಕ ಹೆಸರು ಕ್ಲೆರೋಡೆಂಡ್ರಮ್ ಪ್ಯಾನಿಕುಲೇಟಮ್. ಪುಷ್ಪಜೋಡಣೆಯ ಪರಿಯಿಂದಾಗಿ ಪ್ಯಾನಿಕುಲೇಟಮ್ ಎಂಬ ವಿಶೇಷಣ ಈ ಸಸ್ಯದ ಹೆಸರಿನೊಡನೆ ಸೇರಿಕೊಂಡಿದೆ.

ಕೆಲವು ಪ್ರದೇಶಗಳಲ್ಲಿ ಇದನ್ನು 'ಕೃಷ್ಣ ಕಿರೀಟಂ' ಎಂದು ಕರೆಯುತ್ತಾರೆ. 'ಆರೆಂಜ್ ಟವರ್ ಫ್ಲವರ್' ಪರ್ಯಾಯ ನಾಮ. ಒಂದೆರಡು



ಸೆಂಟಿಮೀಟರ್ ವ್ಯಾಸದ ಹತ್ತಾರು ಪುಟ್ಟ ಪುಷ್ಪಗಳು ಇಳಿಕೆಯಾಗುತ್ತಿರುವ ವ್ಯಾಸದ ಅನೇಕ ದುಂಡು ಪದರಗಳಲ್ಲಿ ಅರಳಿದಾಗ ಪಗೋಡದ ಬಹುಮಹಡಿ ಗೋಪುರದಂತೆ ಗೋಚರಿಸುವುದರಿಂದ ಇದನ್ನು ಪಗೋಡ ಪುಷ್ಪ ಎಂದೂ ಕರೆಯುತ್ತಾರೆ.

ಈ ಸಸ್ಯದ ಹೂಗಳು ಕಿತ್ತಳೆ ಮಿಶ್ರಿತ ಕೆಂಪು ಅಥವಾ ನಸುಗೆಂಪು ವರ್ಣ ಹೊಂದಿರುತ್ತವೆ. ಈ ಕುಸುಮಗಳು ದ್ವಿಲಿಂಗಿ ಹಾಗೂ ಪರಿಮಳರಹಿತವಾಗಿರುತ್ತವೆ. ನೀಳವಾದ ಕೇಸರಗಳು ಮತ್ತು ಶಲಾಕ ನಳಿಕೆಗಳು ದಳಗಳಿಂದ ಹೊರ ಚಾಚಿಕೊಂಡಿರುತ್ತವೆ. ಅನೇಕ ಕಾಂಡಗಳುಳ್ಳ ಈ ಸಸ್ಯ ನಾಲ್ಕೈದು ಅಡಿ ಎತ್ತರವಿದ್ದು ಮೂರಡಿಯಷ್ಟು ಹರಹು ಹೊಂದಿರುತ್ತದೆ.

ಕೀಟ ಕಡಿತದಿಂದ ಉಂಟಾಗುವ ಊತವನ್ನು ಶಮನಗೊಳಿಸಲು ಈ ಸಸ್ಯದ ಎಲೆ ಮತ್ತು ಹೂಗಳ ರಸ ಉಪಯೋಗಿಸಲ್ಪಡುತ್ತದೆ. ●